ಜನತೆ ನನಗೇನೂ ಕಡಿಮೆ ಮಾಡಿಲ್ಲ. ಅಪಾರ ಪ್ರೀತಿ–ವಿಶ್ವಾಸ ತೋರಿಸಿದ್ದಾರೆ. ಭರವಸೆ ಇಟ್ಟು ಬೆಳೆಸಿದ್ದಾರೆ. ಈ ಸಾಮುದಾಯಿಕ ಪ್ರೀತಿ–ವಿಶ್ವಾಸದ ಮನ್ನಣೆಯೇ ನನ್ನ ಸಾಂಸ್ಕೃತಿಕ ಸಂಪತ್ತು. ನನ್ನ ಕೃತಿಗಳು ಮತ್ತು ಕ್ರಿಯೆಗಳನ್ನೊಂದು ಮಾಡಿದ ಮಾನದಂಡದಿಂದಲೇ ನನಗೆ ಸಾಂಸ್ಕೃತಿಕ ಮಹತ್ವದ ನ್ಯಾಯ ಸಿಕ್ಕಿದೆ. ಬಿಡಿಬಿಡಿಯಾಗಿ ಕೃತಿಗಳೆಲ್ಲಕ್ಕೂ 'ವಿಮರ್ಶೆಯ ನ್ಯಾಯ' ಸಿಕ್ಕಿಲ್ಲವೆಂದು ಕೊರಗುತ್ತ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಮಹತ್ವದ ಮನ್ನಣೆಯನ್ನು ಗೌಣಗೊಳಿಸಲಾರೆ.

◆ **ಸಾಮಾಜಿಕ ಚಳವಳಿಗಳಲ್ಲಿ ಭಾಗವಹಿಸುವುದು ಲೇಖಕರ ಉತ್ತರದಾಯಿತ್ವ ಹೇಗೊ, ಹಾಗೆಯೇ ಸೂಕ್ಷ್ಮವಾದ, ಗಹನವಾದ ಸಾಹಿತ್ಯ ಕೃತಿಗಳನ್ನು, ಸಾಮಾಜಿಕ ಪಠ್ಯಗಳನ್ನೂ ನಿರ್ಮಾಣ ಮಾಡುವುದು ಕೂಡ ಅವರ ಉತ್ತರದಾಯಿತ್ವವಲ್ಲವೆ?**

ಹೌದು, ನಿಜ. ಆದರೆ, ಎರಡನ್ನೂ ಯಾಕೆ ಎದುರು ಬದುರಾಗಿ ನಿಲ್ಲಿಸಬೇಕು? ಚಳವಳಿಗಳಲ್ಲಿ ಭಾಗವಹಿಸುವ ಬರಹಗಾರರು ಸೂಕ್ಷ್ಮವಾದ ಕೃತಿಗಳನ್ನು ಕೊಡಲಾರರೆಂಬ ಅನುಮಾನವಿದ್ದರೆ ಅದು ತಪ್ಪು ಕಲ್ಪನೆ. ಚಳವಳಿಯ ಭಾಗವಾಗುವುದು ಸೂಕ್ಷ್ಮ ಸಾಮಾಜಿಕ ಸಂವೇದನೆಯ ಒಂದು ಫಲಿತವೇ ಆಗಿರುತ್ತದೆ. ಹಾಗೆಂದು ಚಳವಳಿಗಳಲ್ಲಿ ಇರುವವರು ಅಥವಾ ಇಲ್ಲದವರು ಸೂಕ್ಷ್ಮ ಕೃತಿಗಳನ್ನು ಕೊಡಲು ಸಮರ್ಥರೊ ಅಲ್ಲವೊ ಅನ್ನುವುದನ್ನು ಚಳವಳಿಯ ಒಳಹೊರಗಿನ ಮಾನದಂಡದಿಂದ ಅಳೆಯಲಾಗದು. ಒಳಗಿದ್ದವರು ಹೇಗೊ ಹೊರಗಿದ್ದವರು ಕೂಡ ಉತ್ತಮ ಅಥವಾ ಕಳಪೆ ಕೃತಿಗಳನ್ನು ಕೊಡಬಹುದು. ಇಬ್ಬರ ಅನುಭವದ ಸಾಂದ್ರತೆಯ ಸ್ವರೂಪ ಬೇರೆಯಾಗಿರುತ್ತದೆ, ಅಷ್ಟೆ. ಚಳವಳಿಯ ಭಾಗವಾಗದವರೂ ಸಮಾಜಕ್ಕೆ ಉತ್ತರದಾಯಿಯಾಗಬೇಕೆಂದು ಭಾವಿಸಿದವನು ನಾನು. ಹಾಗೆಂದು ಎಲ್ಲರೂ ಚಳವಳಿಯ ಆಶಯವನ್ನು ಮಾತ್ರ ಅಭಿವ್ಯಕ್ತಿಸಬೇಕೆಂದು ಹೇಳುತ್ತಿಲ್ಲ. ಸೂಕ್ಷ್ಮ ಹಾಗೂ ಗಹನವಾದ ಸಾಹಿತ್ಯ ಕೃತಿಗಳನ್ನು, ಸಾಮಾಜಿಕ ಪಠ್ಯಗಳನ್ನು ನಿರ್ಮಾಣ ಮಾಡುವುದು ಎಲ್ಲರ ಜವಾಬ್ದಾರಿ. ಚಳವಳಿ ವಿಷಯ ಬಂದ ಕೂಡಲೆ ಅದು ಸೂಕ್ಷ್ಮ ಅಲ್ಲ ಎಂದು ಭಾವಿಸಬಾರದು. ಜನವಿರೋಧಿಯಲ್ಲದ ಬೇರೆ ವಸ್ತುವುಳ್ಳ ರಚನೆಗಳನ್ನು ಚಳವಳಿ ವಿರೋಧಿ ಎಂದು ತಿಳಿಯಬಾರದು. ಹಾಗೆ ನೋಡಿದರೆ, ನನ್ನ ದೃಷ್ಟಿಯಲ್ಲಿ ಚಳವಳಿ ಪ್ರಜ್ಞೆಯೆನ್ನುವುದೇ ಸೂಕ್ಷ್ಮವೂ ಗಹನವೂ ಆಗಿರಬೇಕು. ಚಳವಳಿಯೇ ಒಂದು ಸೂಕ್ಷ್ಮ ಸಾಮಾಜಿಕ ಸೃಜನಶೀಲ ಕೃತಿ. ಎಲ್ಲ ಚಳವಳಿಗಳು ಮತ್ತು ಅದರ ಭಾಗಿದಾರರು ಹೀಗೇ ಇರುತ್ತಾರೆಯೇ ಎಂಬುದು ಬೇರೆ ಚರ್ಚೆ. ಆದರೆ, ಚಳವಳಿಯ ಪ್ರಜ್ಞೆಯು ತಾನಾಗಿಯೇ ಸೂಕ್ಷ್ಮತೆಯ ವಿರೋಧಿಯಲ್ಲ. ಸೃಜನಶೀಲತೆಯ ವಿರೋಧಿಯೂ ಅಲ್ಲ. ನಾವು ನಂಬಿದ ಸಿದ್ಧಾಂತಗಳನ್ನು ಜಡಗೊಳಿಸದೇ ಇದ್ದರೆ ಚಳವಳಿಗಳು ಸದಾ ಚಲನಶೀಲವಾಗಿರುತ್ತವೆ. ಮೂಲ ಆಶಯಗಳನ್ನು ಬಿಟ್ಟುಕೊಡದೆ ಸಿದ್ಧಾಂತಗಳನ್ನು ಸೃಜನಶೀಲಗೊಳಿಸುತ್ತಿರಬೇಕು. ನಾನು ಸೈದ್ಧಾಂತಿಕ ಸೃಜನಶೀಲತೆಯ ಪ್ರತಿಪಾದಕ. ಸಿದ್ಧಾಂತಗಳು ಸಮಕಾಲೀನ ಸಂದರ್ಭದ ಜೊತೆ ಅನುಸಂಧಾನಿಸುತ್ತ, ಹೊಸ ಚೈತನ್ಯ ಪಡೆಯುತ್ತ ಚಲನಶೀಲವೂ ಸೃಜನಶೀಲವೂ ಆಗುತ್ತಿರಬೇಕು. ಕಾಲದ ದನಿಗಳನ್ನು ಧ್ವನಿಸಬೇಕು.

◆ **ಸರ್, ಈಗ ಸಿನಿಮಾದ ಕುರಿತು ಒಂದು ಪ್ರಶ್ನೆ ಕೇಳಬೇಕೆನಿಸಿದೆ. ಒಟ್ಟು ಇಪ್ಪತ್ಮೂರು ಸಿನಿಮಾಗಳನ್ನು ನಿರ್ದೇಶಿಸಿದ್ದೀರಿ. ಈ ಸಿನಿಮಾದ ವ್ಯಾಕರಣವನ್ನು ಕಲಿತದ್ದು ಹೇಗೆ? ಇದು ಕೂಡ ನಿಮ್ಮ ಜನಪರ ಆಶಯಗಳ ಅಭಿವ್ಯಕ್ತಿಗೆ ಮಾಧ್ಯಮವಾಗಿದೆ. ಹಾಗೆ ನೋಡಿದರೆ, ಸಾಹಿತ್ಯ ಮತ್ತು ಸಿನಿಮಾ ಬೇರೆ ಬೇರೆ ಮಾಧ್ಯಮಗಳು. ಮಾಧ್ಯಮ ಬೇರೆಯಾದಾಗ ನಿಮ್ಮ ಅಭಿವ್ಯಕ್ತಿಗೆ ಉಂಟಾಗುವ ಸವಾಲುಗಳೇನು?**